Rotary ರೋಟರಿ **ಐಸಿರಿ** ಪರ್ಕಳ
ವಲಯ-4, ರೋ. ಜಿಲ್ಲೆ-3182
ನಮ್ಮ ನಡೆ... ಕೃಷಿಯ ಕಡೆ...
UNITE FOR GOOD


Rtn. Francesco Arezzo
R.I. President


Rtn. K. Palaksha
District Governor

# ಐಶ್ವರ್ಯ

ಸಂಪುಟ: 4 ಸಾಪ್ತಾಹಿಕ ಸಂಚಿಕೆ : 11
ದಿನಾಂಕ: 16.09.2025


Rtn. Anil Kumar
President


Rtn. Krishnappa
Secretary

## ರಸ್ತೆ ಸುರಕ್ಷತಾ ಅಭಿಯಾನಕ್ಕೆ ಕೈಜೋಡಿಸಿದ ರೋಟರಿ ಐಸಿರಿ





ರೋಟರಿ ಜಿಲ್ಲಾ ಯೋಜನೆಗಳಲ್ಲೊಂದಾದ ರಸ್ತೆ ಸುರಕ್ಷತಾ ಅಭಿಯಾನಕ್ಕೆ ಕೈಜೋಡಿಸಿದ ರೋಟರಿ ಐಸಿರಿ ಪರ್ಕಳದ ಆಟೋರಿಕ್ಷಾ ನಿಲ್ದಾಣದಲ್ಲಿ ಸೆಪ್ಟೆಂಬರ್ 9ರಂದು ಕಾರ್ಯಕ್ರಮ ಆಯೋಜಿಸಿತು. ಜಿಲ್ಲಾ ರೋಟರಿಯ ಪಬ್ಲಿಕ್ ಇಮೇಜ್ ಸಭಾಪತಿ ರೊ. ಸೌಮ್ಯಮಣಿ ಅವರ ಪ್ರೇರಣೆಯಂತೆ ನಡೆದ ಈ ಕಾರ್ಯಕ್ರಮದಲ್ಲಿ ಮೂವತ್ತು ಜನ ಫಲಾನುಭವಿಗಳು, ಹತ್ತು ರೋಟರಿ ಐಸಿರಿ ಸದಸ್ಯರು ಮತ್ತು ಸಾರ್ವಜನಿಕರು ಉಪಸ್ಥಿತರಿದ್ದರು. ಕಾರ್ಯಕ್ರಮದ ಅಂಗವಾಗಿ "ಡ್ರೈವ್ ಸೇಫ್ – ಸೇವ್ ಲೈಫ್" ಸ್ಟಿಕರ್ ಗಳನ್ನು ವಾಹನಗಳಿಗೆ ಅಂಟಿಸಲಾಯಿತು. ದಂಡಪಾಣಿ ರೊ ಕೊರಗಪ್ಪ ಶೆಟ್ಟಿಗಾರ್ ಅಧ್ಯಕ್ಷರಿಗೆ ಕೊರಳ ಲಾಂಛನ ತೊಡಿಸಿದರು.





ರೋಟರಿ ಕ್ಲಬ್ ಮಣಿಪಾಲ ಹಿಲ್ಸ್ ಆತಿಥ್ಯದಲ್ಲಿ ಸೆಪ್ಟೆಂಬರ್ 11ರಂದು ಮಣಿಪಾಲದ ಎಂ.ಐ.ಟಿ.ಯ ಸ್ಕಿಲ್ ಡೆವೆಲಪಮೆಂಟ್ ಸೆಂಟರ್ ನಲ್ಲಿ ನಡೆದ ಝೋನಲ್ ರಿವ್ಯೂ ಮೀಟಿಂಗ್ ಮತ್ತು ಐ.ಟಿ. ಟ್ರೈನಿಂಗ್ ನಲ್ಲಿ ಜಿಲ್ಲಾ ಸಂಪುಟದಲ್ಲಿರುವ ರೋಟರಿ ಐಸಿರಿಯ ಸದಸ್ಯರು ಸಕ್ರಿಯವಾಗಿ ಭಾಗವಹಿಸಿದರು.


ಉದಯವಾಣಿ 2/4

### ರೂಪಶ್ರೀ ಶೆಟ್ಟಿ ಅವರಿಗೆ ಪಿಎಚ್‌ಡಿ

**ಉಡುಪಿ, ಸೆ. 9:** ಸ್ಕೂಲ್ ಆಫ್ ಕಂಪ್ಯೂಟರ್ ಎಂಜಿನಿಯರಿಂಗ್, ಮಣಿಪಾಲ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಸಹಾಯಕ ಪ್ರಾಧ್ಯಾಪಿಕೆ ರೂಪಶ್ರೀ ಶೆಟ್ಟಿ ಪರ್ಕಳ ಅವರು ಮಂಡಿಸಿದ 'ಡೇಟಾ ಮೈನಿಂಗ್ ಫ್ರೇಮ್ವರ್ಕ್ ಫಾರ್ ಪ್ರೆಡಿಕ್ಟಿಂಗ್ ಓವರಿಯನ್ ಕ್ಯಾನ್ಸರ್' ಎಂಬ ವಿಷಯದ ಸಂಶೋಧನಾ ಪ್ರಬಂಧಕ್ಕೆ ಮಾಹೆ ವಿವಿ ಪಿಎಚ್‌ಡಿ ನೀಡಿದೆ. ಎಂಐಟಿ ಪ್ರಾಧ್ಯಾಪಕರಾದ ಡಾ। ಗೀತಾ ಮಯ್ಯ, ಡಾ। ಶ್ಯಾಮಲಾ ಜಿ., ಡಾ। ಯು. ದಿನೇಶ್ ಆಚಾರ್ಯ ಅವರ ಮಾರ್ಗದರ್ಶನದಲ್ಲಿ ಈ ಸಂಶೋಧನೆ ನಡೆಸಿದ್ದಾರೆ. ಇವರು ಮುದ್ರಾಡಿ ಸುನಿಲ್ ಕುಮಾರ್ ಶೆಟ್ಟಿ ಅವರ ಪತ್ನಿ.

**ಅಭಿನಂದನೆಗಳು:** ರೋಟರಿ ಐಸಿರಿಯ ನಿಕಟಪೂರ್ವ ಅಧ್ಯಕ್ಷರೂ, ಪ್ರಸ್ತುತ ಸಂಘಸೇವಾ ನಿರ್ದೇಶಕರೂ ಆಗಿರುವ ರೊ. ಸುನೀಲ್ ಕುಮಾರ್ ಅವರ ಪತ್ನಿ ಶ್ರೀಮತಿ ರೂಪಶ್ರೀ ಶೆಟ್ಟಿ ಪರ್ಕಳ, ಇವರ ಸಂಶೋಧನಾ ಪ್ರಬಂಧಕ್ಕೆ ಮಣಿಪಾಲದ ಮಾಹೆ ವಿಶ್ವವಿದ್ಯಾಲಯ ಪಿ.ಹೆಚ್.ಡಿ. ಪದವಿ ನೀಡಿದೆ. ಡಾ. ರೂಪಶ್ರೀಯವರು ಮಣಿಪಾಲ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಸ್ಕೂಲ್ ಆಫ್ ಕಂಪ್ಯೂಟರ್ ಇಂಜಿನಿಯರಿಂಗ್ ನಲ್ಲಿ ಸಹಾಯಕ ಪ್ರಾಧ್ಯಾಪಕರಾಗಿದ್ದಾರೆ.

## ಅಡುಗೆಮನೆ ಮೌನವಾದಾಗ ..... ಕೌಟುಂಬಿಕ ಬಾಂಧವ್ಯದ ಮೇಲೆ ಪರಿಣಾಮಗಳು!

ಅಡುಗೆ ಕೇವಲ ಮನೆಯ ಕೆಲಸವಲ್ಲ, ಅದು ಕುಟುಂಬಗಳನ್ನು ಬೆಸೆಯುವ ಅದೃಶ್ಯ ದಾರ ಎಂದು ನೀವು ಎಂದಾದರೂ ಯೋಚಿಸಿದ್ದೀರಾ?

1980ರ ದಶಕದಲ್ಲಿ, ಅಮೆರಿಕನ್ ಮನೆಗಳು ಅಡುಗೆ ಮಾಡುವುದನ್ನು ನಿಲ್ಲಿಸಿ, ಹೊರಗಿನಿಂದ ಆಹಾರ ತರಿಸುವುದು ಮತ್ತು ರೆಸ್ಟೋರೆಂಟ್‌ಗಳಿಗೆ ಹೆಚ್ಚು ಒಲವು ತೋರಲು ಶುರು ಮಾಡಿದಾಗ, ಕೆಲವು ಅರ್ಥಶಾಸ್ತ್ರಜ್ಞರು ಒಂದು ಎಚ್ಚರಿಕೆ ನೀಡಿದರು: "ಸರ್ಕಾರವು ಮಕ್ಕಳು ಮತ್ತು ವೃದ್ಧರ ಜವಾಬ್ದಾರಿ ವಹಿಸಿಕೊಂಡರೆ ಮತ್ತು ಖಾಸಗಿ ಸಂಸ್ಥೆಗಳು ಆಹಾರ ಒದಗಿಸಿದರೆ, ಕುಟುಂಬದ ಮೂಲಭೂತ ಅಡಿಪಾಯವೇ ದುರ್ಬಲಗೊಳ್ಳುತ್ತದೆ." ಆ ಸಮಯದಲ್ಲಿ, ಇದನ್ನು ಯಾರೂ ಗಂಭೀರವಾಗಿ ಪರಿಗಣಿಸಲಿಲ್ಲ, ಆದರೆ ಇಂದಿನ ಅಂಕಿಅಂಶಗಳು ವಾಸ್ತವವನ್ನು ತಿಳಿಸುತ್ತವೆ.

1971ರಲ್ಲಿ, 71% ಅಮೆರಿಕನ್ ಕುಟುಂಬಗಳು ಪಾರಂಪರಿಕ ಕುಟುಂಬಗಳಾಗಿದ್ದವು—ಗಂಡ, ಹೆಂಡತಿ ಮತ್ತು ಮಕ್ಕಳು ಒಟ್ಟಾಗಿ ವಾಸಿಸುತ್ತಿದ್ದರು. ಇಂದು, ಆ ಸಂಖ್ಯೆ ಕೇವಲ 20%ಕ್ಕೆ ಇಳಿದಿದೆ. ಉಳಿದವರು ಎಲ್ಲಿ ಹೋದರು? ವೃದ್ಧಾಶ್ರಮಗಳು, ಬಾಡಿಗೆ ಅಪಾರ್ಟ್‌ಮೆಂಟ್‌ಗಳು, ಮತ್ತು ಛಿದ್ರಗೊಂಡ ಬದುಕುಗಳು. ಈಗ 15% ಮಹಿಳೆಯರು ಏಕಾಂಗಿಯಾಗಿ ವಾಸಿಸುತ್ತಿದ್ದಾರೆ, 12% ಪುರುಷರು ಕುಟುಂಬದೊಂದಿಗೆ ಇದ್ದರೂ ಪ್ರತ್ಯೇಕವಾಗಿ ಬದುಕುತ್ತಿದ್ದಾರೆ, 41% ಮಕ್ಕಳು ವಿವಾಹದ ಹೊರಗೆ ಜನಿಸುತ್ತಿದ್ದಾರೆ, ಮತ್ತು ವಿಚ್ಛೇದನ ಪ್ರಮಾಣ ಮೊದಲ ವಿವಾಹದಲ್ಲಿ 50%, ಎರಡನೆಯದರಲ್ಲಿ 67% ಮತ್ತು ಮೂರನೆಯದರಲ್ಲಿ 74%ಕ್ಕೆ ಏರಿದೆ. ಈ ಕುಸಿತ ಆಕಸ್ಮಿಕವಲ್ಲ. ಇದು ಅಡಿಗೆಮನೆ ಮುಚ್ಚಿಹೋದ ಕಾರಣದಿಂದ ಉಂಟಾದ ಅದೃಶ್ಯ ಸಾಮಾಜಿಕ ನಷ್ಟ.

ಮನೆಯಲ್ಲಿ ತಯಾರಿಸಿದ ಊಟ ಏಕೆ ಮುಖ್ಯ? ಏಕೆಂದರೆ ಮನೆಯ ಆಹಾರ ಕೇವಲ ಪೋಷಣೆಯಲ್ಲ—ಅದು ಪ್ರೀತಿ, ಬಾಂಧವ್ಯ ಮತ್ತು ಸೇರಿದ ಭಾವನೆ. ಕುಟುಂಬಗಳು ಒಟ್ಟಾಗಿ ಮೇಜಿನ ಸುತ್ತ ಕುಳಿತಾಗ, ಹೃದಯಗಳು ಹತ್ತಿರವಾಗುತ್ತವೆ, ಮಕ್ಕಳು ಹಿರಿಯರಿಂದ ಜ್ಞಾನವನ್ನು ಹೀರಿಕೊಳ್ಳುತ್ತಾರೆ ಮತ್ತು ಸಂಬಂಧಗಳು ಮೃದುವಾಗಿ, ಬೆಚ್ಚಗಾಗುತ್ತವೆ. ಆದರೆ ಪ್ರತಿಯೊಬ್ಬರೂ ತಮ್ಮ ತಮ್ಮ ಸಾಧನಗಳಲ್ಲಿ ಮುಳುಗಿ ಏಕಾಂಗಿಯಾಗಿ ತಿಂದಾಗ, ಮನೆ ಒಂದು ಅತಿಥಿಗೃಹದಂತಾಗುತ್ತದೆ, ಮತ್ತು ಕೌಟುಂಬಿಕ ಸಂಬಂಧಗಳು ಸಾಮಾಜಿಕ ಮಾಧ್ಯಮದ "ಸ್ನೇಹಿತರ"ಂತೆ—ಔಪಚಾರಿಕ, ದೂರದ, ತಾತ್ಕಾಲಿಕವಾಗುತ್ತವೆ.

ಹೊರಗೆ ಊಟ ಮಾಡುವುದರ ಅದೃಶ್ಯ ವೆಚ್ಚವೂ ಅಷ್ಟೇ ಆತಂಕಕಾರಿ... ಕಳಪೆ ಎಣ್ಣೆಗಳು, ಕೃತಕ ಸುವಾಸನೆಗಳು ಮತ್ತು ಫಾಸ್ಟ್ ಫುಡ್‌ಗೆ ದಾಸರಾಗುವುದರಿಂದ ಇಂದಿನ ಯುವ ಪೀಳಿಗೆ ಸಹ ಬೊಜ್ಜು, ಮಧುಮೇಹ, ಅಧಿಕ ರಕ್ತದೊತ್ತಡ ಮತ್ತು ಹೃದಯ ರೋಗಗಳಿಂದ ಬಳಲುತ್ತಿದೆ. ಇಂದು ನಾವು ಏನನ್ನು ತಿನ್ನಬೇಕು ಎಂಬುದನ್ನು ಕಾರ್ಪೊರೇಟ್ ಕಂಪನಿಗಳು ನಿರ್ಧರಿಸುತ್ತವೆ, ಮತ್ತು ಫಾರ್ಮಾಸ್ಯುಟಿಕಲ್ ಕಂಪನಿಗಳು ನಮ್ಮನ್ನು "ಆರೋಗ್ಯವಂತರನ್ನಾಗಿ" ಇಡುವ ಮೂಲಕ ಲಾಭ ಗಳಿಸುತ್ತವೆ. ನಮ್ಮ ಅಜ್ಜ-ಅಜ್ಜಿಯರು ದೂರದ ಪ್ರಯಾಣಗಳಲ್ಲೂ ಮನೆಯಲ್ಲಿ ತಯಾರಿಸಿದ ಆಹಾರವನ್ನು ಕೊಂಡೊಯ್ಯುತ್ತಿದ್ದರು. ಇಂದು ನಾವು ಮನೆಯಲ್ಲಿ ಕುಳಿತು ಹೊರಗಿನಿಂದ ಆರ್ಡರ್ ಮಾಡುತ್ತೇವೆ ಮತ್ತು ಅದನ್ನು ಅನುಕೂಲಕರ ಎಂದು ಕರೆಯುತ್ತೇವೆ.

ಇನ್ನೂ ಸಮಯ ಮೀರಿಲ್ಲ. ನಾವು ಅಡಿಗೆಮನೆಯನ್ನು ಮತ್ತೆ ಪ್ರಜ್ವಲಿಸಬಹುದು—ಕೇವಲ ಒಲೆಯನ್ನು ಮಾತ್ರವಲ್ಲ, ಅದರೊಂದಿಗೆ ಬರುವ ಉಷ್ಣತೆ, ರಕ್ಷಣೆ, ಸಂಸ್ಕೃತಿ ಮತ್ತು ಆರೋಗ್ಯವನ್ನೂ ಸಹ. ಏಕೆಂದರೆ ಮಲಗುವ ಕೋಣೆ ಒಂದು ಮನೆಯನ್ನು ಮಾಡುತ್ತದೆ, ಆದರೆ ಅಡಿಗೆಮನೆ ಒಂದು ಕುಟುಂಬವನ್ನು ಮಾಡುತ್ತದೆ.

ಜಗತ್ತಿನಾದ್ಯಂತದ ಪಾಠಗಳು ಈ ಅಂಶವನ್ನು ದೃಢಪಡಿಸುತ್ತವೆ. ಜಪಾನಿ ಕುಟುಂಬಗಳು ಇಂದಿಗೂ ಒಟ್ಟಾಗಿ ಅಡುಗೆ ಮಾಡಿ ತಿನ್ನುವುದಕ್ಕೆ ಒತ್ತು ನೀಡುತ್ತವೆ, ಇದು ಅವರ ಜೀವಿತಾವಧಿ ಜಗತ್ತಿನಲ್ಲಿ ಅತಿ ಹೆಚ್ಚಿರಲು ಒಂದು ಕಾರಣ. ಮೆಡಿಟರೇನಿಯನ್ ಕುಟುಂಬಗಳು ಊಟದ ಸಮಯವನ್ನು ಒಂದು ಪವಿತ್ರ ಆಚರಣೆಯಂತೆ ನೋಡುತ್ತವೆ, ಮತ್ತು ವಿಜ್ಞಾನಿಗಳು ಇದನ್ನು ಬಲವಾದ ಕೌಟುಂಬಿಕ ಸಂಬಂಧಗಳು ಮತ್ತು ಆರೋಗ್ಯಕರ ಜೀವನಶೈಲಿಗೆ ಜೋಡಿಸುತ್ತಾರೆ. ಕಾರ್ಪೊರೇಟ್ ನಾಯಕತ್ವದಲ್ಲೂ ಸಹ, "ಒಟ್ಟಾಗಿ ಊಟ ಮಾಡುವುದು" ನಂಬಿಕೆ ಮತ್ತು ಬಾಂಧವ್ಯದ ಸಂಕೇತವಾಗಿದೆ.

ಅಡಿಗೆಮನೆ ಕೇವಲ ಆಹಾರ ತಯಾರಿಸುವ ಸ್ಥಳವಲ್ಲ. ಅದು ಸಂಬಂಧಗಳನ್ನು ಪೋಷಿಸುವ, ಸಂಪ್ರದಾಯಗಳನ್ನು ಮುಂದುವರಿಸುವ ಮತ್ತು ಕುಟುಂಬಗಳನ್ನು ಒಟ್ಟಾಗಿ ಹಿಡಿದಿಟ್ಟುಕೊಳ್ಳುವ ಸ್ಥಳವಾಗಿದೆ...

*(ಇದು ವಾಟ್ಸಾಪ್ ನಲ್ಲಿ ಫಾರ್ವರ್ಡ್ ಆದ ಸಂದೇಶವಾಗಿರುತ್ತದೆ.)*

## ಬೌದ್ಧಿಕ ಸಿರಿ

**ಹದ್ದಿನ ಪುನರ್ಜನ್ಮದಿಂದ ......**

ಪಕ್ಷಿಗಳಲ್ಲೇ ಅತೀ ಹೆಚ್ಚು ಜೀವಿತಾವಧಿಯನ್ನು ಹೊಂದಿರುವ ಪಕ್ಷಿಯೆಂದರೆ ಹದ್ದು. ಹದ್ದು ಸುಮಾರು 70 ವರ್ಷಗಳವರೆಗೆ ಬದುಕಬಲ್ಲದು. ಆದರೆ ಇಷ್ಟು ವರ್ಷ ಬದುಕಬೇಕಾದರೆ ತನ್ನ 40ನೇ ವಯಸ್ಸಿನಲ್ಲಿ ಹದ್ದು ಕಠಿಣವಾದ ನಿರ್ಧಾರವೊಂದನ್ನು ತೆಗೆದು ಕೊಳ್ಳಬೇಕಾಗುತ್ತದೆ.

ನಲ್ವತ್ತರ ಹರೆಯದ ಹದ್ದಿಗೆ ಅದರ ಉದ್ದವಾಗಿ ಬೆಳೆದಿರುವ ಉಗುರುಗಳಿಂದ ಮತ್ತು ಬಾಗುತ್ತಾ ಬಂದ ಕೊಕ್ಕಿನಿಂದ ಭೇಟೆಯನ್ನು ಹಿಡಿಯಲು ಕಷ್ಟವಾಗುತ್ತದೆ. ಅಲ್ಲದೇ ಗರಿಗಳೂ ದಪ್ಪವಾಗುತ್ತಾ ಹೋಗುವುದರಿಂದ ರೆಕ್ಕೆಗಳ ಭಾರವೂ ಹೆಚ್ಚುತ್ತಾ ಎದೆಗೆ ಅಂಟಿಳ್ಳಲಾರಂಭಿಸಿ ಹಾರಲು ಕಷ್ಟವಾಗುತ್ತವೆ.

ಈ ವಯಸ್ಸಿನಲ್ಲಿ ಹದ್ದಿಗೆ ಕೇವಲ ಎರಡೇ ಆಯ್ಕೆಗಳಿರುತ್ತವೆ – ಒಂದೋ ಸಾಯುವುದು, ಅಥವಾ ಸುಮಾರು ನೂರೈವತ್ತು ದಿನಗಳವರೆಗೆ ನಡೆಯುವ ಬದಲಾವಣೆಯ, ನೋವಿನ ಪ್ರಕ್ರಿಯೆಗೆ ತನ್ನನ್ನು ತಾನು ಒಡ್ಡಿಕೊಳ್ಳುವುದು.

ಎರಡನೇಯದ್ದನ್ನು ಆಯ್ದ ಹದ್ದು ಪರ್ವತದ ತುದಿಗೆ ಹಾರಿ ಗೂಡನ್ನು ರಚಿಸಿ, ಅದರಲ್ಲಿ ಕುಳಿತುಕೊಳ್ಳುತ್ತದೆ. ನಂತರ ತನ್ನ ಕೊಕ್ಕನ್ನು ಬಂಡೆಗೆ ಅಪ್ಪಳಿಸುತ್ತಾ, ಅದನ್ನು ಕಿತ್ತುಕೊಳ್ಳುತ್ತದೆ. ನಂತರ, ಹೊಸ ಕೊಕ್ಕು ಮತ್ತೆ ಬೆಳೆಯಲು ಕಾಯುತ್ತದೆ. ಬಳಿಕ ಅದು ತನ್ನ ಉಗುರುಗಳನ್ನು ಕಿತ್ತುಕೊಳ್ಳುತ್ತದೆ. ಅದರ ಹೊಸ ಉಗುರುಗಳು ಮತ್ತೆ ಬೆಳೆದಾಗ, ಹದ್ದು ತನ್ನ ಹಳೆಯ ಗರಿಗಳನ್ನು ಕಿತ್ತುಕೊಳ್ಳಲು ಪ್ರಾರಂಭಿಸುತ್ತದೆ.

ಕ್ರಮೇಣ ಹೊಸ ಗರಿಗಳು ಮೂಡಿದಾಗ ಅದು ತನ್ನ ಪ್ರಸಿದ್ಧ ಪುನರ್ಜನ್ಮದ ಹಾರಾಟವನ್ನು ಆರಂಭಿಸುತ್ತದೆ. ಸುಮಾರು ಐದು ತಿಂಗಳ ಈ ನೋವಿನ ಪ್ರಕ್ರಿಯೆಯ ಬಳಿಕ ಅದು ಇನ್ನೂ 30 ವರ್ಷಗಳ ಕಾಲ ಬದುಕುತ್ತದೆ.

ನಾವೂ ಕೆಲವೊಮ್ಮೆ ನಮ್ಮ ಭವಿಷ್ಯಕ್ಕೆ ತೊಡಕಾಗುವ ಕೆಟ್ಟ ಸಂಗತಿಗಳು, ಕೆಟ್ಟ ಸಂಗಾತಿಗಳು, ಕೆಟ್ಟ ನೆನಪುಗಳು, ಕೆಟ್ಟ ಅಭ್ಯಾಸಗಳ ಹೊರೆಗಳಿದ್ದರೆ, ಅವುಗಳನ್ನು ತೊಡೆದುಹಾಕಿ ಮುಕ್ತರಾಗಬೇಕಾಗುತ್ತದೆ. ಆಗ ಮಾತ್ರ ನಾವು ವರ್ತಮಾನದ ಲಾಭವನ್ನು ಪಡೆದು ಭವಿಷ್ಯವನ್ನು ಪುನರೂಪಿಸಬಹುದು.

## ಶಿಕ್ಷಕರ ದಿನಾಚರಣೆ




ಶಿಕ್ಷಕರ ದಿನಾಚರಣೆಯ ಸಂದರ್ಭದಲ್ಲಿ ಅಧ್ಯಕ್ಷ ರೊ. ಅನಿಲ್ ಕುಮಾರ್ ಅವರಿಂದ ಗೌರವಿಸಲ್ಪಟ್ಟ ರೊ. ಡಾ. ಪ್ರಭಾಕರ ರೆಂಜಾಳ ಹಾಗೂ ರೊ. ಸ್ಮಿತಾ ಕಾಮತ್.

## ಸೆಪ್ಟೆಂಬರ್ 9 ರ ಸಭೆಯ ಝಲಕ್










Rotary RID 3182

Drive Safe Save Life

## ಕಾರ್ಯದರ್ಶಿಯವರ ವರದಿ



ರೋಟರಿ ಐಸಿರಿ ಪರ್ಕಳ ಇದರ 10ನೇ ವಾರದ ಸಭೆ 9/9/2025 ಮಂಗಳವಾರದಂದು RCC ಕಾರ್ಯಾಲಯದಲ್ಲಿ ಜರುಗಿತು. ದಂಡಪಾಣಿ ರೊ ಕೊರಗಪ್ಪ ಶೆಟ್ಟಿಗಾರ್ ಅಧ್ಯಕ್ಷರಿಗೆ ಕೊರಳ ಲಾಂಛನ ತೊಡಿಸಿದರು.

ರೊ. ಗುರುಪ್ರಸಾದ್ ಕಾಮತ್ ಪ್ರಾರ್ಥನೆ ನಡೆಸಿದರು. ಅಧ್ಯಕ್ಷ ರೊ. ಅನಿಲ್ ಕುಮಾರ್ ಎಲ್ಲರನ್ನೂ ಸ್ವಾಗತಿಸಿದರು. ಕಾರ್ಯದರ್ಶಿ ರೊ. ಕೃಷ್ಣಪ್ಪ ಅವರು ವಾರದ ವರದಿಯನ್ನು ಮಂಡಿಸಿದರು.

ಶಿಕ್ಷಕರ ದಿನಾಚರಣೆಯ ಪ್ರಯುಕ್ತ ರೊ. Dr. ಪ್ರಭಾಕರ ರೆಂಜಾಳ ಹಾಗೂ ರೊ. ಸ್ಮಿತಾ ಕಾಮತ್ ಅವರನ್ನು ಗುರುತಿಸಲಾಯಿತು. ರೊ. ಪ್ರಭಾಕರ ಶೆಟ್ಟಿ ವಾರದ ಬುಲೆಟಿನ್ ಬಿಡುಗಡೆ ಗೊಳಿಸಿದರು. ಸಂಪಾದಕ ರೊ. ರಾಜೇಶ್ ಡಿ. ಶೆಣೈ ಸಹಕರಿಸಿದರು.

ಸದಸ್ಯರ ಅವಕಾಶದಲ್ಲಿ ರೊ. ಪ್ರಭಾಕರ ಶೆಟ್ಟಿ ಅಂಗನವಾಡಿಯ ಶಿಕ್ಷಕರ ದಿನಾಚರಣೆ ಬಗ್ಗೆ ಮಾತನಾಡಿದರು ಮತ್ತು ಇಂಟರಾಕ್ಟ ಅಸೆಂಬ್ಲಿ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ರೊ. ರಾಜೇಶ್ ಡಿ. ಶೆಣೈ ಅವರು ಇಷ್ಟು ದೊಡ್ಡ ಮಟ್ಟದ ಕಾರ್ಯಕ್ರಮ ಐಸಿರಿ ಮಾಡಿದೆ ಎಂಬುದೇ ಆಶ್ಚರ್ಯ, ಕಾರ್ಯಕ್ರಮದ ವಿಶೇಷತೆಗಳನ್ನು ಗುರುತಿಸಿದರು. ರೊ. ಸುಕೇಶ್ ಕುಂದರ್ ಮಾತನಾಡಿ ಎಲ್ಲ ರೀತಿಯಲ್ಲಿ ರೋಟರಿ ಐಸಿರಿ ಜೊತೆಗೂಡಿ ಯಶಸ್ವಿ ಕಾರ್ಯಕ್ರಮ ನೀಡಿದೆ ಎಂದರು.

ರೊ. ಗುರುಪ್ರಸಾದ್ ಕಾಮತ್ ಮಾತನಾಡಿ ವಲಯ ಮತ್ತು ಜಿಲ್ಲೆಯಿಂದ ಬಂದಿರುವ ಪ್ರಶಂಸೆಗಳನ್ನು ತಿಳಿಸಿ ಅಧ್ಯಕ್ಷರನ್ನು ವಿಶೇಷವಾಗಿ ಅಭಿನಂದಿಸಿದರು. ರೊ. ಸ್ಮಿತಾ ಜಿ. ಕಾಮತ್ ಅವರು ಸುಧೀರ್ಘವಾಗಿ ಮಾತನಾಡಿ ಹಲವಾರು ಸದಸ್ಯರು ವಿಶಿಷ್ಟ ರೀತಿಯಲ್ಲಿ ತಮ್ಮ ತಮ್ಮ ಕರ್ತವ್ಯವನ್ನು ನಿರ್ವಹಿಸುತ್ತ ನೀಡಿದ ಸಹಕಾರಕ್ಕೆ ಪ್ರಶಂಸಿಸಿದರು. ವಲಯ ಹಾಗೂ ಜಿಲ್ಲಾ ಮಟ್ಟದ ಪದಾಧಿಕಾರಿಗಳಿಂದ ಬಂದ ಮೆಚ್ಚುಗೆಯ ಮಾತುಗಳನ್ನು ತಿಳಿಸಿದರು.

ತಮಗೆ ದೊರಕಿದ ಸನ್ಮಾನ ಐಸಿರಿಗೆ ಸಲ್ಲಬೇಕು ಎಂದರು. ರೊ. ಪಾಂಡುರಂಗ ಲಗ್ವಾಂಕರ್ ತಮ್ಮ ಅನಿಸಿಕೆಯಲ್ಲಿ ಅಧ್ಯಕ್ಷರ ಹಾಗೂ ಸದಸ್ಯರ ಒಗ್ಗಟ್ಟು ಮತ್ತು ಶ್ರಮವನ್ನು ಪ್ರಶಂಸಿಸಿದರು. ರೊ. ಪ್ರಭಾಕರ್ ರೆಂಜಾಳ, ರೊ. ಕೊರಗಪ್ಪ ಶೆಟ್ಟಿಗಾರ್, ರೊ. ಮಂಜುನಾಥ್ ಉಪಾಧ್ಯ ಅವರು ತಮ್ಮ ಅನಿಸಿಕೆ ಹಂಚಿಕೊಂಡರು. ಅಧ್ಯಕ್ಷರು ರೋಟರಿ ಐಸಿರಿಯ ಸರ್ವ ಸದಸ್ಯರ ಸಹಕಾರಕ್ಕೆ ವಂದಿಸಿದರು.

ರೊ ಗೀತಾಶ್ರೀ ಉಪಾಧ್ಯ ಅವರಿಗೆ ಹುಟ್ಟುಹಬ್ಬದ ಶುಭಾಶಯ ಕೋರಿ, ಗುರುತಿಸಲಾಯಿತು.

ಅದೃಷ್ಟಶಾಲಿ ವ್ಯಕ್ತಿ ಆಯ್ಕೆಯನ್ನು ರೊ. ಗುರುಪ್ರಸಾದ್ ಕಾಮತ್ ಅವರು ನಡೆಸಿದರು. ರೊ. ಕೊರಗಪ್ಪ ಶೆಟ್ಟಿಗಾರ್ ಅದೃಷ್ಟಶಾಲಿ ರೋಟರಿಯನ್ ಆಗಿ ಆಯ್ಕೆಗೊಂಡರು.

ಕಾರ್ಯದರ್ಶಿ ರೊ. ಕೃಷ್ಣಪ್ಪ ಅವರು ವಂದನಾರ್ಪಣೆಗೈದರು. ದಂಡಪಾಣಿ ಕೊರಳ ಲಾಂಛನ ತೆಗೆದು ಅಧ್ಯಕ್ಷರು ಸಭೆಯನ್ನು ಮುಂದೂಡಿದರು.

ರಾಷ್ಟ್ರಗೀತೆಯೊಂದಿಗೆ ಸಭೆ ಮುಕ್ತಾಯಗೊಂಡಿತು.

## "ಐಶ್ವರ್ಯ" 10ನೇ ಸಂಚಿಕೆ ಬಿಡುಗಡೆ




ರೊ. ರಾಜೇಶ್ ಡಿ. ಶೆಣೈ ಸಂಪಾದಕತ್ವದ ರೋಟರಿ ಐಸಿರಿಯ "ಐಶ್ವರ್ಯ" ಸಾಪ್ತಾಹಿಕ ಸಂಚಿಕೆಯ ಹತ್ತನೇ ಆವೃತ್ತಿಯನ್ನು ಸ್ಥಾಪಕಾಧ್ಯಕ್ಷರೂ, ವೃತ್ತಿಸೇವಾ ನಿರ್ದೇಶಕರೂ ಅದ ರೊ. ಪ್ರಭಾಕರ ಶೆಟ್ಟಿಯವರು 09/09/2025ರಂದು ಬಿಡುಗಡೆ ಗೊಳಿಸಿದರು.




ರೋಟರಿ ಐಸಿರಿಯ ಹತ್ತನೇ ವಾರದ ಸಭೆಯಲ್ಲಿ ಅದೃಷ್ಟಶಾಲಿ ರೊಟೇರಿಯನ್ ಆಯ್ಕೆಯನ್ನು ರೊ. ಗುರುಪ್ರಸಾದ್ ಕಾಮತ್ ನಡೆಸಿದರು. ರೊ. ಕೊರಗಪ್ಪ ಶೆಟ್ಟಿಗಾರ್ ಅವರು ಅದೃಷ್ಟಶಾಲಿ ರೋಟರಿಯನ್ ಆಗಿ ಆಯ್ಕೆಯಾದರು.




ಸೆಪ್ಟೆಂಬರ್ 4ರಂದು ಹುಟ್ಟುಹಬ್ಬ ಆಚರಿಸಿದ ರೋಟರಿ ಜಿಲ್ಲೆ 3182ರ ಕಾನ್ಫರೆನ್ಸ್ ಪ್ರಮೋಷನ್ ವಲಯಾಧಿಕಾರಿ, ರೋಟರಿ ಐಸಿರಿಯ ಸಂಘಸೇವಾ ವಿಭಾಗದ ಸದಸ್ಯತನ ಅಭಿವೃದ್ಧಿ ಅಧಿಕಾರಿ ರೊ. ಗೀತಾಶ್ರೀ ಎಮ್. ಉಪಾಧ್ಯ ಅವರನ್ನು ಸೆಪ್ಟೆಂಬರ್ 9ರ ವಾರದ ಸಭೆಯಲ್ಲಿ ಅಧ್ಯಕ್ಷ ರೊ. ಅನಿಲ್ ಕುಮಾರ್ ಅವರು ಉಡುಗೊರೆಯೊಂದಿಗೆ ಗೌರವಿಸಿದರು.